ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ- ಶ್ರೀ. ಜೆ.ಜೆ. ಎಮ್.ಯು ವಕೀಲರಿಂದ ಪ್ರತಿವಾದಿಯರ ಪರವಾಗಿ

16. ಪ್ರತಿವಾದಿಯವರು ನನಗೆ 25 ವರ್ಷಗಳಿಂದ ಪರಿಚಯ. ಅವರು ಗ್ರಾಮ ಪಂಚಾಯಿತಿಯ ಸದಸ್ಯರು ಆಗಿದ್ದರು ಎಂದರೆ ಸರಿ. ಅದೇ ರೀತಿ ಬಂಗಾಡಿಯ ಸಹಕಾರ ಸಂಘದ ಅಧ್ಯಕ್ಷರು ಆಗಿದ್ದರು ಎಂದರೆ ಸರಿ. ಅದೇ ರೀತಿ ಅರ್ಧನಾರೇಶ್ವರ ಬಂಗಾಡಿ ದೇವಸ್ಥಾನದ ಟ್ರಸ್ಟಿ ಆಗಿಯೂ ಸಹಃ ಕೆಲಸ ಮಾಡಿದ್ದಾರೆ ಎಂದರೆ ಸರಿ. ಅದೇ ರೀತಿ ಕೊಲ್ಲಿ ದೇವಸ್ಥಾನದ ಬ್ರಹ್ಮ ಕಲಸೋಸ್ಥವ ಸಮಿತಿಯ ಕಾರ್ಯಕಾರಿ ಸದಸ್ಯರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

17. ನಾನು ಹಾಗೂ ಪ್ರತಿವಾದಿ ಬಂಗಾಡಿಯ ಸಹಕಾರ ಸಂಘದಲ್ಲಿ ಒಂದೇ ಅವಧಿಯಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಅದೇ ರೀತಿ ನಾವಿಬ್ಬರೂ ಹಲವಾರು ಕಾರ್ಯಕ್ರಮಗಳಲ್ಲಿ ಒಟ್ಟಿಗೆ ಗೌರವ ವ್ಯಕ್ತಿಗಳಾಗಿ ಹಾಜರಾಗಿರುತ್ತೇವೆ ಎಂದರೆ ಸರಿ. ನನ್ನ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಪ್ರತಿವಾದಿಯವರು ಅತಿಥಿಯಾಗಿ ಭಾಗವಹಿಸಿದ್ದಾರೆ ಎಂದರೆ ಸರಿ.

18. ಪ್ರತಿವಾದಿಯವರು ಅವರ ಖ್ಯಾತಿಯನ್ನು ಕುಗ್ಗಿಸುವ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಪ್ರತಿವಾದಿಯವರು ನನ್ನ ವಿರುದ್ದ ಈ ಕೇಸಿನಲ್ಲಿ ನಾನು ಹೇಳಿರುವಂತೆ ಮಾನಹಾನಿಯಾಗುವಂತಹಃ ಹೇಳಿಕೆಯನ್ನು ನೀಡಿಲ್ಲ ಮತ್ತು ಪ್ರಯತ್ನವನ್ನು ಸಹಃ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಹೇಳಿರುವ ವಿಚಾರವನ್ನು ಪ್ರತಿವಾದಿಯವರು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನಗೆ ಮಾನಹಾನಿಯಾಗುವಂತಹಃ ಯಾವುದೇ ವಿಚಾರವನ್ನು ಪ್ರತಿವಾದಿಯವರು ಸಾಮಾಜಿಕ ಜಾಲತಾಣದಲ್ಲಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

19. ಪ್ರತಿವಾದಿಯವರಿಗೆ ಪೇಸ್ ಬುಕ್ ಅನ್ನು ಬಳಕೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯವರಿಗೆ ವಾಟ್ಸಪ್ ಬಳಕೆ ಮಾಡಲು ಸಹಃ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ನಾನು ನನ್ನ ಸ್ನೇಹಿತರಿಗೆ ತಿಳಿಸಿರುತ್ತೇನೆ. ಆದರೆ ಊರಿನವರಿಗೆ ತಿಳಿಸಿರುವುದಿಲ್ಲ.

20. ಈ ದಾವೆಯಲ್ಲಿ ನನಗೆ ತಡೆಯಾಜ್ಞೆ ಸಿಕ್ಕಿದೆ ಎಂದು ಸ್ನೇಹಿತರು ಹಾಗೂ ಊರಿನವರ ಬಳಿ ಹೇಳಿರುತ್ತೇನೆಂದರೆ ಸರಿಯಲ್ಲ. ಈ ದಾವೆಯ ಮೂಲಕ ಪ್ರತಿವಾದಿಯವರ ವಿರುದ್ಧ ಸಮಾಜದಲ್ಲಿ ಅಪಕೀರ್ತಿ ತರುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ